ಓ.ಎಸ್. ನಂಃ 07/2020
ಡಿ.ಡಬ್ಲ್ಯೂ-1 (ಜುಬೇರಅಹ್ಮದ)

ದಿನಾಂಕ: 30-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ</u>**

ನನ್ನ ತಂದೆ ಸರಕಾರಿ ಉರ್ದು ಶಾಲೆಯಲ್ಲಿ ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದರು ಎಂದರೆ ಸರಿ. ನಮ್ಮ ತಂದೆ 1972 ರಲ್ಲಿ ಕೆಲಸಕ್ಕೆ ಸೇರಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ 1967 ರಲ್ಲಿ ಕೆಲಸಕ್ಕೆ ಸೇರಿದ್ದರು. ನನ್ನ ತಂದೆಯ ಮೊದಲನೆ ಹೆಂಡತಿ ತಾರಮ್ಮ ಎಂದರೆ ಸರಿ. ನನ್ನ ತಂದೆ ಮತ್ತು ತಾರಮ್ಮ ಇವರ ವೈವಾಹಿಕ ಜೀವನದಿಂದ ವಾದಿ 1972 ರಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ವಾದಿ 05 ವರ್ಷದವರಿದ್ದಾಗ ಅವರ ತಾಯಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಂತರ 1980 ರಲ್ಲಿ ನನ್ನ ತಂದೆ 1ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು 1ನೇ ಪ್ರತಿವಾದಿಯ ವೈವಾಹಿಕ ಜೀವನದಿಂದ 2 ರಿಂದ 6ನೇ ಪ್ರತಿವಾದಿಯರು ಜನಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು 1ನೇ ಪ್ರತಿವಾದಿಯ ಮದುವೆ ಕಾಲಕ್ಕೆ 1ನೇ ಪ್ರತಿವಾದಿಗೆ 25 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿದಾರರು 21 ವರ್ಷ ವಯಸ್ಸಾಗಿತ್ತು ಎಂದು ಹೇಳುತ್ತಾರೆ.

2. 2ನೇ ಪ್ರತಿವಾದಿ 1981ರಲ್ಲಿ ಜನಿಸಿರುತ್ತಾರೆ. 3ನೇ ಪ್ರತಿವಾದಿ 1983 ರಲ್ಲಿ ಜನಿಸಿರುತ್ತಾರೆ. ನಾನು ಪ್ರತಿವಾದಿ 1985ರಲ್ಲಿ ಜನಿಸಿರುತ್ತೇನೆ. 5ನೇ ಪ್ರತಿವಾದಿ 1987ರಲ್ಲಿ ಜನಿಸಿರುತ್ತಾರೆ. 6ನೇ ಪ್ರತಿವಾದಿ 1988ರಲ್ಲಿ ಜನಿಸಿರುತ್ತಾರೆ. ನನ್ನ ತಾಯಿಗೆ 05 ಮಕ್ಕಳು ಜನಿಸಿದ್ದರಿಂದ ಅವರು ಕೆಲಸಕ್ಕೆ

ಬೇರೆ ಕಡೆ ಹೋಗುತ್ತಿರಲಿಲ್ಲ, ಮನೆಯಲ್ಲಿಯೇ ಮನೆ ಕೆಲಸ ಮಾಡಿಕೊಂಡಿದ್ದರು ಎಂದರೆ ಸಾಕ್ಷಿದಾರರು ಮನೆಯಲ್ಲಿ ಬಳೆಯ ವ್ಯಾಪಾರ ಮಾಡುತ್ತಿದ್ದರು ಎಂದು ಹೇಳುತ್ತಾರೆ. 1ನೇ ಪ್ರತಿವಾದಿ ಯಾವತ್ತೂ ಬಳೆ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆ ತಮಗೆ ಬರುತ್ತಿದ್ದ ಪಗಾರದಿಂದ ಮನೆಯ ಖರ್ಚು ವೆಚ್ಚಗಳನ್ನು ನಿಭಾಯಿಸುತ್ತಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಯಾವುದೇ ವೈಯಕ್ತಿಕ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ತಂದೆಗೆ 2ನೇ ಹೆಂಡತಿಯಾಗಿದ್ದರಿಂದ ತಮ್ಮ ಜೀವನದ ಭದ್ರತೆಗಾಗಿ ಆಸ್ತಿಗಳನ್ನು ತಮ್ಮ ಹೆಸರಿಗೆ ಹಚ್ಚು ಎಂದು ಕೇಳುತ್ತಿದ್ದರು ಎಂದರೆ ಸರಿಯಲ್ಲ.

4. ನನ್ನ ತಂದೆ ತಮ್ಮ ಸಂಬಳದ ಹಣವನ್ನು ಉಪಯೋಗ ಮಾಡಿ 1985 ರಲ್ಲಿ ಐಟಂ.ನಂ.6ರ ಆಸ್ತಿ ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಬಳೆ ವ್ಯಾಪಾರ ಮಾಡಲು ಮುನಿಸಿಪಾಲಿಟಿಯಿಂದ ಅನುಮತಿ ಪತ್ರ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಬಳಿ ಬಳೆ ವ್ಯಾಪಾರ ಮಾಡಲು ಲೈಸನ್ಸ ಪಡೆದ ಬಗ್ಗೆ ಯಾವ ದಾಖಲೆಗಳಿವೆ ಎಂದು ನನ್ನ ತಾಯಿಗೆ ವಿಚಾರಿಸಿಲ್ಲ. ಸದರಿ ದಾಖಲೆ ಇದ್ದಲ್ಲಿ ನಾನು ಅದನ್ನು ಹಾಜರ ಪಡಿಸುತ್ತೇನೆ. ನನ್ನ ತಾಯಿ ಯಾವತ್ತೂ ಬಳೆ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

5. ನಾನು ವ್ಯಾಪಾರ ಮಾಡುತ್ತೇನೆ. ನಾನು ವ್ಯಾಪಾರ ಮಾಡುತ್ತಿದ್ದುದ್ದರಿಂದ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ವ್ಯಾಪಾರ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಯಾವುದೇ ದಾಖಲಾತಿ ಮಾಡಬೇಕಾದಲ್ಲಿ ಆ ವ್ಯಕ್ತಿಯ ಉದ್ಯೋಗ ನಮೂದಿಸುತ್ತಾರೆ ಎಂದರೆ ಸರಿಯಲ್ಲ.

6. ನನ್ನ ತಾಯಿಯ ಹೆಸರಿನಲ್ಲಿ ನನ್ನ ತಂದೆ ಖರೀದಿ ಮಾಡಿದ ಆಸ್ತಿಯ ಖರೀದಿ ಪತ್ರ ಹಾಜರ ಮಾಡಿದ್ದೇನೆ ಎಂದರೆ ತಮ್ಮ ತಾಯಿ ಖರೀದಿ ಮಾಡಿದ ಆಸ್ತಿಯ ಖರೀದಿ ಪತ್ರ ಹಾಜರ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಡಿ-27 ರಲ್ಲಿ ನನ್ನ ತಾಯಿಯ ವಯಸ್ಸು 30 ವರ್ಷ ಹಾಗೂ ಉದ್ಯೋಗ ಮನೆ ಕೆಲಸ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಈಗ ಸಾಕ್ಷಿದಾರರಿಗೆ ನಿಡಿ-27ಎ ತೋರಿಸಿದ್ದು ಅದನ್ನು ನೋಡಿ ಸದರಿ ದಾಖಲೆಯಲ್ಲಿ ತಮ್ಮ ತಾಯಿಯ ಉದ್ಯೋಗ ಮನೆ ಕೆಲಸ ಎಂದು ಬರೆಯಲಾಗಿದೆ ಎಂದು ಹೇಳುತ್ತಾರೆ. ನಿಡಿ-27 ರಲ್ಲಿ ನಮೂದಿಸಿರುವ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ನನ್ನ ತಾಯಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರ ಆದ ಸಮಯದಲ್ಲಿ ನನ್ನ ತಾಯಿ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಆದ್ದರಿಂದ ಅವರ ಉದ್ಯೋಗ ಮನೆಕೆಲಸ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

7. ನಿಡಿ-27 ರ ಅಡಿ ಖರೀದಿಸಿದ ಆಸ್ತಿ ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನಿಡಿ-27 ರಲ್ಲಿ ತೋರಿಸಿರುವ ಆಸ್ತಿ ಖರೀದಿ

ಮಾಡುವ ಸಮಯದಲ್ಲಿ ನನ್ನ ತಾಯಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ತಂದೆ ಅವರು ಸಂಪಾದನೆ ಮಾಡಿದ ದುಡ್ಡಿನಲ್ಲಿ ಖರೀದಿ ಮಾಡಿದ್ದರಿಂದ ನನ್ನ ತಂದೆಯ ಮರಣಾ ನಂತರ ಆ ಆಸ್ತಿಯಲ್ಲಿ ನಮ್ಮ ತಂದೆಯ ಎಲ್ಲ ವಾರಸುದಾರರಿಗೆ ಹಕ್ಕು ಪ್ರಾಪ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ